ದಿನಾಂಕ 22.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿಗಳ ಪರ ಶ್ರೀ ಎಂ.ಕೆ.ಸಿ ವಕೀಲ **ರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ವಾದಿಯು ಸಾಕ್ಷ ನುಡಿಯಲು ಬರೆದುಕೊಟ್ಟ ಅಧಿಕಾರ ಪತ್ರವನ್ನು ನಿಪಿ-1 ಎಂದು,

2. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-2 ಎಂದು,

3. ಕೆ ಆರ್ ಪೇಟೆ ತಾಲ್ಲೂಕು, ಶೀಳನೆರೆ ಹೋಬಳಿ, ರಾಮನಹಳ್ಳಿ ಗ್ರಾಮದ ಸರ್ವೇ ನಂಬರ್ 12/1 ರ 2024-25 ನೇ ಸಾಲಿನ ಪಹಣಿಯನ್ನು ನಿಪಿ-3 ಎಂದು,

4. ಕೆ ಆರ್ ಪೇಟೆ ತಾಲ್ಲೂಕು, ಶೀಳನೆರೆ ಹೋಬಳಿ, ರಾಮನಹಳ್ಳಿ ಗ್ರಾಮದ ಸರ್ವೇ ನಂಬರ್ 10/1 ರ 2024-25 ನೇ ಸಾಲಿನ ಪಹಣಿಯನ್ನು ನಿಪಿ-4 ಎಂದು,

5. ಕೆ ಆರ್ ಪೇಟೆ ತಾಲ್ಲೂಕು, ಶೀಳನೆರೆ ಹೋಬಳಿ, ರಾಮನಹಳ್ಳಿ ಗ್ರಾಮದ ಸರ್ವೇ ನಂಬರ್ 9/1 ರ 2024-25 ನೇ ಸಾಲಿನ ಪಹಣಿಯನ್ನು ನಿಪಿ-5 ಎಂದು,

6. ಎಂ. ಆರ್ ನಂಬರ್ 10/1998-99 ರ ಧೃಢೀಕೃತ ಪ್ರತಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಈ ಎಲ್ಲಾ ಕಾರಣಗಳಿಗಾಗಿ ವಾದಿ ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.